1

**ದಿನಾಂಕ 06-11-2014ರಂದು ಅಪರಾಹ್ನ 4:00 ಗಂಟೆಗೆ ನಡೆದ ಕರ್ನಾಟಕ ರಾಜ್ಯ ಮಾಹಿತಿ ಆಯೋಗದ ಸಭೆಯ ನಡವಳಿಗಳು**

**ಅಧ್ಯಕ್ಷತೆ:**

**ಶ್ರೀ ಎ.ಕೆ.ಎಂ. ನಾಯಕ್, ರಾಜ್ಯ ಮುಖ್ಯ ಮಾಹಿತಿ ಆಯುಕ್ತರು**

**ಸಭೆಯಲ್ಲಿ ಹಾಜರಿದ್ದವರು:**

1) ಶ್ರೀ ಡಿ. ತಂಗರಾಜ್, ರಾಜ್ಯ ಮಾಹಿತಿ ಆಯುಕ್ತರು
2) ಶ್ರೀ ಎಂ.ಆರ್. ಪೂಜಾರ್, ರಾಜ್ಯ ಮಾಹಿತಿ ಆಯುಕ್ತರು
3) ಶ್ರೀ ಟಿ. ರಾಮನಾಯಕ್, ರಾಜ್ಯ ಮಾಹಿತಿ ಆಯುಕ್ತರು
4) ಡಾ॥ ಶೇಖರ್ ಡಿ ಸಜ್ಜನರ್, ರಾಜ್ಯ ಮಾಹಿತಿ ಆಯುಕ್ತರು
5) ಶ್ರೀ ಕೃಷ್ಣಮೂರ್ತಿ, ರಾಜ್ಯ ಮಾಹಿತಿ ಆಯುಕ್ತರು
6) ಶ್ರೀ ಶಂಕರ್ ಆರ್ ಪಾಟೀಲ್, ರಾಜ್ಯ ಮಾಹಿತಿ ಆಯುಕ್ತರು
7) ಶ್ರೀ ವೃಷಬೇಂದ್ರಮೂರ್ತಿ, ಕಾರ್ಯದರ್ಶಿ
8) ಶ್ರೀ ಬಿ. ಶ್ರೀರಾಮರೆಡ್ಡಿ, ಕಾನೂನು ಅಧಿಕಾರಿ

**ದಿನಾಂಕ 06-11-2014ರಂದು ಸಭೆಯಲ್ಲಿ ಈ ಕೆಳಕಂಡ ವಿಷಯಗಳನ್ನು ಚರ್ಚಿಸಲಾಯಿತು:-**

1. ವಿಷಯ: ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಯಾರೆಂಬುದನ್ನು ದೃಢಪಡಿಸಿಕೊಂಡು ಹಲವು ನಿರ್ದೇಶನಗಳನ್ನು ನೀಡಲು ಕಾರ್ಯದರ್ಶಿಯವರಿಗೆ ಅಧಿಕಾರ ನೀಡುವ ಬಗ್ಗೆ

ಮಾಹಿತಿ ಆಯೋಗದ ಮುಂದೆ ಅತಿ ಹೆಚ್ಚು ಪ್ರಮಾಣದ ಮೇಲ್ಮನವಿಗಳು ಬಾಕಿ ಇರುವುದರಿಂದ ಮತ್ತು ಹೆಚ್ಚಿನ ಪ್ರಕರಣಗಳು ದಾಖಲಾಗುತ್ತಿರುವುದರಿಂದ ಮಾಹಿತಿ ಹಕ್ಕು ಕಾಯಿದೆಯ ಉದ್ದೇಶ ಅತಿ ಜರೂರಾಗಿ ನೆರವೇರುವ ಸಲುವಾಗಿ ಮೇಲ್ಮನವಿಗಳ ಪೂರ್ಣ ಪ್ರಮಾಣದ ವಿಚಾರಣೆ ಕೈಗೆತ್ತಿಕೊಳ್ಳುವ ಪೂರ್ವದಲ್ಲಿ, ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಯಾರೆಂಬುದನ್ನು ದೃಢಪಡಿಸಿಕೊಂಡು ಹಲವು ನಿರ್ದೇಶನಗಳನ್ನು ಆಯೋಗ ನೀಡುವ ಬಗ್ಗೆ ಚರ್ಚಿಸಲಾಯಿತು.

(i) *ಈಗಾಗಲೇ ಮೇಲ್ಮನವಿದಾರರಿಗೆ ಮಾಹಿತಿಯನ್ನು ನೀಡಿದ್ದಲ್ಲಿ (a) ನೀಡಿರುವ ಮಾಹಿತಿಯ ಪ್ರತಿ, (b) ಮಾಹಿತಿಯೊಂದಿಗೆ ಬರೆದ ಪತ್ರದ ಪ್ರತಿ ಮತ್ತು (c) ಮಾಹಿತಿಯನ್ನು ಸ್ವೀಕರಿಸಿದ ಬಗ್ಗೆ ಅವರಿಂದ ಪಡೆದಿರುವ ಮುದ್ದಾಂ ಸ್ವೀಕೃತಿ/ಅಂಚೆ ರಸೀತಿಯ ಛಾಯಾ ಪ್ರತಿ ಇವುಗಳನ್ನು ಈ ಕೂಡಲೇ ಆಯೋಗಕ್ಕೆ ತಲುಪಿಸುವಂತೆ ಸಾರ್ವಜನಿಕ ಮಾಹಿತಿ ಅಧಿಕಾರಿಗಳಿಗೆ ನಿರ್ದೇಶಿಸಲು,*

(ii) *ಈ ನಿರ್ದೇಶನದಂತೆ ಮೇಲ್ಮನವಿದಾರರಿಗೆ ಮಾಹಿತಿಯನ್ನು ನೀಡಿದಲ್ಲಿ (a) ನೀಡಿರುವ ಮಾಹಿತಿಯ ಪ್ರತಿ, (b) ಮಾಹಿತಿಯೊಂದಿಗೆ ಬರೆದ ಪತ್ರದ ಪ್ರತಿ ಮತ್ತು (c) ಮಾಹಿತಿಯನ್ನು ಸ್ವೀಕರಿಸಿದ ಬಗ್ಗೆ ಅವರಿಂದ ಪಡೆದಿರುವ ಮುದ್ದಾಂ ಸ್ವೀಕೃತಿ/ಅಂಚೆ ರಸೀತಿಯ ಛಾಯಾ ಪ್ರತಿ ಇವುಗಳನ್ನು ಆಯೋಗಕ್ಕೆ ತಲುಪಿಸುವಂತೆ ಸಾರ್ವಜನಿಕ ಮಾಹಿತಿ ಅಧಿಕಾರಿಗಳಿಗೆ ನಿರ್ದೇಶಿಸಲು,*

(iii) ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಮೇಲ್ಮನವಿದಾರರಿಂದ ಮಾಹಿತಿ ಹಕ್ಕು ಕಾಯಿದೆಯ ಕಲಂ 6(1)ರಡಿ ಸ್ವೀಕರಿಸಿದ ಅರ್ಜಿಗಳಿಗೆ ಮಾಹಿತಿ ಹಕ್ಕು ಕಾಯಿದೆಯ ಕಲಂ 7(1)ರಡಿ ನಿಗಧಿಪಡಿಸಿರುವ ಅವಧಿಯೊಳಗೆ ಅಥವಾ ಇಲ್ಲಿ ತನಕವಾಗಲೀ ಮಾಹಿತಿಯನ್ನು ಪೂರೈಸದೇ ಇದ್ದಲ್ಲಿ ಅಥವಾ ಮಾಹಿತಿ ನೀಡುವಲ್ಲಿ ಯಾವುದೇ ರೀತಿಯಲ್ಲಿ ವಿಳಂಬವಾಗಿದ್ದಲ್ಲಿ ಮಾಹಿತಿ ಹಕ್ಕು ಕಾಯಿದೆಯ ಕಲಂ 20(1)ರ ಪ್ರಕಾರ ದಂಡವನ್ನು ಏಕೆ ವಿಧಿಸಬಾರದು ಎಂಬುದರ ಬಗ್ಗೆ ಸಾರ್ವಜನಿಕ ಮಾಹಿತಿ ಅಧಿಕಾರಿಗಳು ತಮ್ಮ ಲಿಖಿತ ಹೇಳಿಕೆಗಳನ್ನು ಆಯೋಗಕ್ಕೆ 30 ದಿನಗಳೊಳಗೆ ಸಲ್ಲಿಸತಕ್ಕದೆಂದು ತಿಳಿಸಲು ತೀರ್ಮಾನಿಸಲಾಯಿತು.

(iv) ಸಾರ್ವಜನಿಕ ಮಾಹಿತಿ ಅಧಿಕಾರಿಗಳಿಂದ ಸ್ವೀಕರಿಸಿದ ಲಿಖಿತ ಹೇಳಿಕೆಗಳನ್ನು ಹಾಗೂ ಮೇಲ್ಮನವಿದಾರರಿಗೆ ನೀಡಿದ ಮಾಹಿತಿಗಳು ಹಾಗೂ ಅಡಕಗಳನ್ನು ಕಡತದಲ್ಲಿರಿಸಿ ಆಯುಕ್ತರಿಗೆ ಸಲ್ಲಿಸುವಂತೆಯೂ ಕಾರ್ಯದರ್ಶಿಯವರಿಗೆ ನಿರ್ದೇಶಿಸಲು ತೀರ್ಮಾನಿಸಿದೆ.

ಕ್ರಮ: ಕಾರ್ಯದರ್ಶಿಗಳು.

2. **ವಿಷಯ: ಮಾಹಿತಿ ಹಕ್ಕು ಕಾಯಿದೆಯ ಕಲಂ 19(3)ರ ಪರಂತುವಿನಲ್ಲಿ ತಿಳಿಸಿರುವ ಅವಧಿಯ ನಂತರ ಎರಡನೇ ಮೇಲ್ಮನವಿ ದಾಖಲಿಸುವಲ್ಲಿ ಉಂಟಾಗಿರುವ ವಿಳಂಬ ಬಗ್ಗೆ**

ಮಾಹಿತಿ ಹಕ್ಕು ಕಾಯಿದೆಯ ಕಲಂ 19(3)ರ ಪರಂತುವಿನಲ್ಲಿ ತಿಳಿಸಿರುವ ಅವಧಿಯನ್ನು ಮೀರಿ ಎರಡನೇ ಮೇಲ್ಮನವಿಗಳನ್ನು ಆಯೋಗಕ್ಕೆ ದಾಖಲು ಮಾಡಿದ್ದಲ್ಲಿ, ಅಂತಹ ಪ್ರಕರಣಗಳಲ್ಲಿ ವಿಳಂಬವನ್ನು ಮನ್ನಾ ಮಾಡುವ ಬಗ್ಗೆ ಆಯುಕ್ತರುಗಳೇ ತೀರ್ಮಾನ ತೆಗೆದುಕೊಳ್ಳಬೇಕಾಗಿರುವುದರಿಂದ, ಮಾಮೂಲಾಗಿ (usual courseನಲ್ಲಿ) ಪ್ರಕರಣಗಳನ್ನು ಆಯುಕ್ತರುಗಳಿಗೆ ಹಂಚಿಕೆ ಮಾಡುವಂತೆ ಕಾರ್ಯದರ್ಶಿಯವರಿಗೆ ಸೂಚಿಸಲಾಯಿತು.

ಕ್ರಮ: ಕಾರ್ಯದರ್ಶಿಗಳು.

3. **ವಿಷಯ: ಪ್ರಕರಣಗಳು ವಿಚಾರಣೆಗೆ ಬರುವುದು ತಡವಾಗುವುದರಿಂದ ಮಾಹಿತಿಗಾಗಿ ಅಂತಿಮ ಆದೇಶದವರೆಗೂ ಕಾಯದೆ ಶೀಘ್ರವಾಗಿ ಮಾಹಿತಿಯನ್ನು ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಮೇಲ್ಮನವಿದಾರರಿಗೆ ಪೂರೈಸುವುದರ ಸಂಬಂಧದಲ್ಲಿ ಆದೇಶ ಹೊರಡಿಸುವುದರ ಬಗ್ಗೆ**

ಮಾಹಿತಿ ಆಯೋಗದ ಮುಂದೆ ಅತಿ ಹೆಚ್ಚು ಪ್ರಮಾಣದ ಮೇಲ್ಮನವಿಗಳು ಬಾಕಿ ಇರುವುದರಿಂದ ಮತ್ತು ಹೆಚ್ಚಿನ ಪ್ರಕರಣಗಳು ದಾಖಲಾಗುತ್ತಿರುವುದರಿಂದ ಅವುಗಳನ್ನು ವಿಚಾರಣೆಗೆ ಕೈಗೆತ್ತಿಕೊಳ್ಳಲು ತಡವಾಗುತ್ತಿರುತ್ತದೆ. ಮೇಲ್ಮನವಿದಾರರಿಗೆ ಮಾಹಿತಿ ಲಭ್ಯವಾಗುವುದು ಸಹ ತುಂಬಾ ವಿಳಂಬವಾಗುತ್ತಿರುತ್ತದೆ. ಆದ್ದರಿಂದ, ಮಾಹಿತಿ ಹಕ್ಕು ಕಾಯಿದೆಯ ಉದ್ದೇಶ ಅತಿ ಜರೂರಾಗಿ ನೆರವೇರುವ ಸಲುವಾಗಿ ಮೇಲ್ಮನವಿಗಳ ಪೂರ್ಣ ಪ್ರಮಾಣದ ವಿಚಾರಣೆ ಕೈಗೆತ್ತಿಕೊಳ್ಳುವ ಪೂರ್ವದಲ್ಲಿಯೇ, ವಿಷಯ (1)ರಲ್ಲಿ ಹೇಳಿರುವ ನಿರ್ದೇಶನಗಳನ್ನು ಒಳಗೊಂಡ ಆದೇಶವನ್ನು ಸಾರ್ವಜನಿಕ ಮಾಹಿತಿ ಅಧಿಕಾರಿಗೆ ನೀಡಲು ಆಯೋಗವು

ತೀರ್ಮಾನಿಸಿರುತ್ತದೆ. ಈ ಆದೇಶದ ಜೊತೆಯಲ್ಲಿ ಮೇಲ್ಮನವಿಯ ಪ್ರತಿಯನ್ನು ಮತ್ತು **ಅದರ ಅಡಕಗಳೊಂದಿಗೆ** ಕಳುಹಿಸುವಂತೆ ನಿರ್ದೇಶನ ನೀಡಲು ಸಹಾ ಆಯೋಗವು ತೀರ್ಮಾನಿಸಿರುತ್ತದೆ.

ಕ್ರಮ: ಕಾರ್ಯದರ್ಶಿಗಳು.

(ಎ.ಕೆ.ಎಂ. ನಾಯಕ್)
ರಾಜ್ಯ ಮುಖ್ಯ ಮಾಹಿತಿ ಆಯುಕ್ತರು